# ನೈತಿಕ ಫ್ಯಾಷನ್



ಜಾಗತಿಕವಾಗಿ ಲಕ್ಷ ಲಕ್ಷ ಕೋಟಿ ರೂಪಾಯಿ ವಹಿವಾಟು ನಡೆಸುತ್ತಿರುವ ಫ್ಯಾಷನ್ ಕ್ಷೇತ್ರ ಒಂದಲ್ಲ ಒಂದು ರೀತಿಯಲ್ಲಿ ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ. ಸೌಂದರ್ಯದ ಸೋಗಿನಲ್ಲಿ ಈ ಉದ್ಯಮ ದಿನದಿಂದ ದಿನಕ್ಕೆ ಆಕರ್ಷಣೆ ಹೆಚ್ಚಿಸಿಕೊಳ್ಳುತ್ತಿದೆ. ಆದರೆ ಈ ಫ್ಯಾಷನ್‌ನ ಚೆಲುವಿನ ಮುಖವಾಡದ ಹಿಂದೆ ಮಾಲಿನ್ಯದ ಭೀಕರತೆಯಿದೆ. ಈ ಅಪಾಯದ ಕರೆಗಂಟೆಗೆ ಪರ್ಯಾಯವಾಗಿ ರೂಪುಗೊಂಡ ಪರಿಕಲ್ಪನೆ 'ಪರಿಸರಸ್ನೇಹಿ ಫ್ಯಾಷನ್' ಅಥವಾ 'ಸಸ್ಟನೇಬಲ್ ಫ್ಯಾಷನ್'. ಉಪಭೋಗ ಸಂಸ್ಕೃತಿ ನಮ್ಮ ಬದುಕನ್ನೂ ಭೂಮಿಯನ್ನೂ ಹೊಸ ಹೊಸ ಪರಿವೇಷಗಳಲ್ಲಿ ವಿನಾಶದತ್ತ ತಳ್ಳುತ್ತಿರುವ ಸಂದರ್ಭದಲ್ಲಿ ಜವಾಬ್ದಾರಿಯುತ ಫ್ಯಾಷನ್ ಪರಿಕಲ್ಪನೆಯನ್ನು ಪರಿಚಯಿಸುವ ಉದ್ದೇಶ ನಮ್ಮದು.

■ ಸುರೇಖಾ ಹೆಗಡೆ